ಪರಿಸಿ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಪಂಚಾಯಿತಿಗೆ ೩ ಗ್ರಾಮ, ೨ ಗ್ರಾಮಗಳು, ೫ ಗ್ರಾಮ ಗಳು ಈ ರೀತಿ ಇರುತ್ತವೆ. ಎಲ್ಲಾ ಗ್ರಾಮಗಳಿಗೂ ಸೇರಿಸಿ ಒಂದೇ ಮೋಟರನ್ನು ಹಾಕಿರುತ್ತಾರೆ. ಯಾವುದೇ ಒಂದು ಗ್ರಾಮ ಎಲೆಕ್ಟ್ರಿಸಿಟಿ ಚಾರ್ಜನ್ನು ಕಟ್ಟದಿದ್ದರೂ ಕೂಡ ಲೈಟನ್ನು ಡಿಸ್‌ಕನ್‌ಕ್ಟ್ ಮಾಡು ತ್ತಾರೆ. ಆಗ ೪-೫ ಗ್ರಾಮಗಳಿಗೂ ಲೈಟು ಇರುವುದಿಲ್ಲ. ಒಂದು ಪಂಚಾಯಿತಿಯಲ್ಲಿ ೩ ಗ್ರಾಮಗಳು ಇರಲಿ, ೪ ಗ್ರಾಮಗಳು ಇರಲಿ, ೫ ಗ್ರಾಮಗಳು ಇರಲಿ ದಯವಿಟ್ಟು ಪ್ರತಿಯೊಂದು ಗ್ರಾಮಕ್ಕೂ ಪ್ರತ್ಯೇ ಕವಾದ ಮೋಟರನ್ನು ಹಾಕತಕ್ಕ ವ್ಯವಸ್ಥೆ ಮಾಡಿದರೆ ಅವರು ಅವರ ಸಂಪನ್ಮೂಲಗಳನ್ನು ಅನುಸರಿಸಿ ಆಯಾ ಗ್ರಾಮಗಳವರು ತಮ್ಮ ಭಾಗದ ವಿದ್ಯುಚ್ಛಕ್ತಿ ಹಣವನ್ನು ಕಟ್ಟಿ ಲೈಟನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಬಹಳ ದಿವಸಗಳಿಂದ ಅರ್ಜ್ ಮಾಡುತ್ತಿದ್ದೇವೆ. ಇದನ್ನು ಮಾನ್ಯ ಮಂತ್ರಿ ಗಳು ದಯವಿಟ್ಟು ಪರ್ಯಾಲೋಚನೆ ಮಾಡುತ್ತೀರಾ!

ಶ್ರೀ ಡಿ. ದೇವರಾಜ ಅರಸ್.—ಯಾವುದಾದರೂ ಒಂದು ಗ್ರಾಮದಲ್ಲಿ ಬಡವರು ದುಡ್ಡು ಕಟ್ಟುವು ದಕ್ಕೆ ಆಗದೆ ಇದ್ದರೆ, ಕಂದಾಯವನ್ನು ಕೊಡುವುದಕ್ಕೆ ಆಗದೇ ಹೋದರೆ ಸ್ವಲ್ಪ ಅನುಕೂಲವಾಗಿರುವ ಗ್ರಾಮಗಳು ಸೇರಿ ಅದನ್ನು ನೋಡಿಕೊಳ್ಳಬೇಕು. ಒಂದು ಊರಿನಲ್ಲಿ ಲೈಟು ಹೋದರೆ ಇನ್ನೊಂದು ಊರಿಗೂ ಲೈಟ್ ಬೇಡ ಪ್ರತಿಯೊಂದು ಊರಿಗೂ ಸಪರೇಟ್ ಮೋಟರ್ ಹಾಕಬೇಕು ಎಂದು ಹೇಳಿದರೆ ನಾವು ಪಂಚಾಯಿತಿಯನ್ನು ಮಾಡಿದ ತತ್ವಕ್ಕೇ ಧಕ್ಕೆ ಬರುತ್ತದೆ ಆದಕ್ಕಾಗಿ ನಾವು ೩-೪ ಹಳ್ಳಿಗಳನ್ನು ಒಂದು ಗೂಡಿಸಿ ಸೇರಿಸಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಈ ಪ್ರಮೇಯ ಬರುವುದಿಲ್ಲ. ಅಲ್ಲಿ ಒಂದೊಂದು ಗ್ರಾಮದಲ್ಲಿಯೂ ೫-೬ ಸಾವಿರ ಪ್ರಜಾಸಂಖ್ಯೆ ಇರುತ್ತದೆ. ಈ ಭಾಗದಲ್ಲಿ ಹಾಗೆ ಇರುವುದಿಲ್ಲ ೩-೪ ಹಳ್ಳಿಗಳನ್ನು ಸೇರಿಸಿ ಒಂದು ಪಂಚಾಯಿತಿಯನ್ನು ಮಾಡಬೇಕಾಗುತ್ತದೆ. ಇದರಲ್ಲಿ ಪಂಚಾಯಿತಿ ಗಳನ್ನು ಮಾಡಿರುವ ತತ್ವ ಏನು ಅಂದರೆ, ಒಂದು ಊರಿನವರು ಎಲೆಕ್ಟ್ರಿಸಿಟಿ ಚಾರ್ಜನ್ನು ಕಟ್ಟದೇ ಹೋದರೂ ಕೂಡ ಇನ್ನೊಂದು ಊರಿನವರು ಕಟ್ಟಿ, ಊರುಗಳಲ್ಲಿ ದೀಪ ಇರುವುದಕ್ಕೆ ಅನುಕೂಲವಾಗಲಿ ಎನ್ನುವ ಒಂದು ದೃಷ್ಟಿಯಿಂದ ಇದನ್ನು ಮಾಡಿದೆ. ಪಂಚಾಯಿತಿಯವರು ಎಲೆಕ್ಟ್ರಿಸಿಟಿ ಚಾರ್ಜನ್ನು ಕಟ್ಟಿಲ್ಲ ಎಂದರೆ ಆ ಪಂಚಾಯಿತಿಯವರು ಸರಿಯಾಗಿ ಕೆಲಸ ಮಾಡಿಲ್ಲ ಎಂದು ಕಾಣುತ್ತದೆ. ಪಂಚಾಯಿತಿಯ ಚುನಾವಣೆಯಲ್ಲಿ ನಾನು ಗೆದ್ದು ಬಂದರೆ ನಾವು ಜನಗಳಿಂದ ತೆರಿಗೆಯನ್ನು ವಸೂಲು ಮಾಡುವುದಿಲ್ಲ, ಮನೆಕಂದಾಯವನ್ನು ವಸೂಲು ಮಾಡುವುದಿಲ್ಲ ಎಂದು ಬೋರ್ಡ್ ಹಾಕಿಕೊಂಡು ತಿರುಗಾಡುತ್ತಾ ಇರು ತ್ತಾರೆ. ಆಮೇಲೆ ಅವರು ಚುನಾವಣೆಯಲ್ಲಿ ಗೆದ್ದು ಬಂದು ಮೆಂಬರಾದ ಮೇಲೆ ಎಲ್ಲಾ ಪುರೆತುಬಿಡು ತ್ತಾರೆ. ಚುನಾವಣೆಗೆ ನಿಂತಾಗ ಕಂದಾಯವನ್ನು ವಸೂಲು ಮಾಡುವುದಿಲ್ಲ ನಾವು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಏನೇನೋ ಹೇಳಿರುತ್ತಾರೆ. ಈ ಗ್ರಾಮಪಂಚಾಯಿತಿಗಳು ಮನೆಕಂದಾಯ ವಸೂಲು ಮಾಡಿ ರಸ್ತೆಗಳಿಗೆ ದೀಪ ಒದಗಿಸುವ ಹಾಗೆ ಮಾಡಬೇಕು.

Construction of Bus Stand and introducing City Service in Mandya

926 Sri M. S. Atmananda (Mandya)—Will the Minister for Transport and Tourism be pleased to state :—

(*a*) the number of direct buses operating between:—

(i) Mandya and Bangalore

(ii) Mandya and Mysore;

(*b*) whether it is a fact that most of the buses that are operating between Bangalore and Mercara, Bangalore and Virajpet or not stopping at Mandya.

(*c*) if so, the reason for not stopping their buses at Mandya;

(*d*) when the construction of K.S.R.T.C. Bus stand will be taken up at Mandya;

(*e*) whether there is any proposal of introducing City Serv in Mandya City?

SRI R. GUNDU RAO (Minister for Transport and Tourism)—

(*a*) At present K.S.R.T.C. is operating 7 direct buses between Mandya and Bangalore (11 trips) and 11 direct buses between Mandya and Mysore (21 trips).

(*b*) No, Out of 10 trips made by K.S.R.T.C. buses from Bangalore to Mercara , 7 Stop at Mandya. Also the Bangalore-Virajpet trips include stoppage at Mandya

(*c*) Does not arise in view of the reply to clause (b) above.

(*d*) It is proposed to take up the work during the current year.

(*e*) No

ಶ್ರೀ ಎಂ. ಎಸ್. ಆತ್ಮಾನಂದ.—ಸ್ವಾಮಿ, ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಮಂಡ್ಯ ಹಾಗೂ ಬೆಂಗಳೂರು ನಡುವೆ ೭ ನೇರ ಬಸ್ಸುಗಳನ್ನೂ ಹಾಗು ಮಂಡ್ಯ ಮತ್ತು, ಮೈಸೂರು ನಡುವೆ ೧೧ ನೇರ ಬಸ್ಸುಗಳನ್ನೂ ಓಡಿಸುತ್ತಿರುವುದಾಗಿ ಹೇಳಿದ್ದೀರಿ. ಈಗ ಮಂಡ್ಯ ಮತ್ತು ಮೈಸೂರು ನಡುವೆ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇರುವುದರಿಂದ ಇನ್ನೂ ಹೆಚ್ಚಿಗೆ ಬಸ್‌ಗಳನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡುತ್ತೀರಾ

ಶ್ರೀ ಆರ್. ಗುಂಡೂರಾವ್.—ಆ ರೀತಿ ಹೆಚ್ಚಿಗೆ ಬಸ್ ಹಾಕಬೇಕೆಂದು ಸರ್ಕಾರದ ಗಮನಕ್ಕೆ ಬಂದರೆ ಹಾಕುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ.—ಸ್ವಾಮಿ, ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಬೆಂಗಳೂರಿನಿಂದ ಮಡಕೇರಿಗೆ ೧೦ ಬಾರಿ ಸಂಚಾರ ಮಾಡುವ ರೆಸ್ಟ್ ಸಾರಿಗೆ ಸಂಸ್ಥೆಯ ಬಸ್ ಪೈಕಿ ಮಂಡ್ಯದಲ್ಲಿ ೭ ಬಸ್‌ಗಳು ನಿಲ್ಲುತ್ತವೆಂದು ಹೇಳಿದ್ದೀರಿ. ಇನ್ನು ಉಳಿದಿರುವ ೩ ಬಾರಿಯೂ ನಿಲ್ಲಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಎಲ್ಲ ಬಸ್‌ಗಳನ್ನೂ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಕಾರಣ ಅನೇಕ ಜನ ಬೇಗ ಮಡಕೇರಿಗೆ ಹೋಗಬೇಕು ಎನ್ನುವವರು ಇರುತ್ತಾರೆ, ಈಗ ತಾವು ಹೇಳಿದಂತೆ ಮಂಡ್ಯ ಮತ್ತು ಮೈಸೂರು ನಡುವೆ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿದೆ ಹೆಚ್ಚಿಗೆ ಬಸ್‌ಗಳನ್ನು ಹಾಕಿ ಎಂದು ಹೇಳಿದ್ದೀರಿ ಇದು ಸರ್ಕಾರದ ಗಮನಕ್ಕೆ ಬಂದರೆ ಪರಿಶೀಲಿಸುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ,—ಸ್ವಾಮಿ, ನನ್ನ ಕೊನೇ ಪ್ರಶ್ನೆಯಲ್ಲಿ ಮಂಡ್ಯ ನಗರದಲ್ಲಿ ನಗರ ಸಾರಿಗೆ ಸೇವೆಯನ್ನು ಪ್ರಾರಂಭಿಸುವ ಸಲಹೆ ಏನಾದರೂ ಇದೆಯೆ ಎಂದು ಕೇಳಿರುವುದಕ್ಕೆ ತಾವು ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈ ವಿಷಯವನ್ನು ಪುನರ್ ಪರಿಶೀಲಿಸಬೇಕು.

ಶ್ರೀ ಆರ್. ಗುಂಡೂರ್‌ವ್.—ಆಗಲಿ, ಇದನ್ನು ಪುನರ್ ಪರಿಶೀಲನೆ ಮಾಡುತ್ತೇವೆ,

Bridge near Keralapura, Arkalgud Taluk

959 SRI K. B. MALLAPPA (Arakalgud).—Will the Minister for Public Works be pleased to state:—

(*a*) whether the construction of the Bridge near Keralapura, Arkalgud Taluk across the Cauvery River is pending;

(*b*) if so, since how many years?